# ಜೋಡಿಸುವ ನದಿಗಳು

ನಿಸರ್ಗ ಸೃಷ್ಟಿಯ ನದಿಗಳು ಎಲ್ಲವನ್ನೂ ಜೋಡಿಸುವ ಏಕತೆಯ ಉತ್ಕೃಷ್ಟ ರೂಪಕ. ತಾವು ಹರಿಯುವ ಕಡೆಯಲ್ಲೆಲ್ಲ ದ್ವೀಪಗಳನ್ನು, ತೀರಗಳನ್ನು, ಮಾನವರನ್ನು ಹಾಗೂ ಬಹುರೂಪದ ಪ್ರಕೃತಿಯನ್ನು ಬೆಸೆಯುತ್ತಾ ಹೋಗುತ್ತವೆ. ಮನುಷ್ಯನ ಸಂಕುಚಿತತೆಗಳನ್ನು ತೊಳೆಯುವ ನದಿಯ ಗುಣಗಳು ಫಲವತ್ತತೆಯ ಸಂಕೇತವೂ ಹಾಗೂ ಸಂಸ್ಕೃತಿಗಳು ಜನ್ಮ ತಳೆಯುವ ನಾಗರಿಕತೆಯ ತೊಟ್ಟಿಲೂ ಆಗಿವೆ. ಭಾಷೆ, ಮತ, ಧರ್ಮ ಹಾಗೂ ಭೇದಭಾವಗಳನ್ನು ನೇಪಥ್ಯಕ್ಕೆ ಸರಿಸಿ, ಜನತೆ ಒಗ್ಗೂಡಿ ಬದುಕುವ ಕಲೆಯನ್ನು ನದಿಗಳು ನಮಗೆ ಕಲಿಸಿಕೊಟ್ಟಿವೆ. ಹೀಗೆ ನದಿಗಳೆಂದರೆ ಎಲ್ಲವನ್ನೂ ಜೋಡಿಸುವ ನಿಸರ್ಗ ಸೃಷ್ಟಿಸಿದ ಕಲೆ.

ಆದರೆ ಮನುಷ್ಯರು ಸೃಷ್ಟಿಸಿದ ವರ್ಣಾಶ್ರಮ ಧರ್ಮವು, ಜಾತಿಪದ್ಧತಿಯು ಮನುಷ್ಯರ ನಡುವೆ ಭೇದಭಾವಗಳನ್ನು ಸೃಷ್ಟಿಸಿದೆ. ಹೀಗೆ ಸೃಷ್ಟಿಸುವುದರ ಮೂಲಕ ನಿಸರ್ಗದ ಸಹಜ ಕಲೆಗೆ ಅಪಚಾರ ಎಸಗಿದೆ. ವಿಲಕ್ಷಣದ ಸಂಗತಿಯೆಂದರೆ, ಕುಡಿಯುವ ನೀರನ್ನು ಮುಟ್ಟಲೂ ಸಹ ಭಾರತೀಯ ಸಮಾಜದಲ್ಲಿ ವಿಧಿ ನಿಷೇಧಗಳಿದ್ದವು! ತಳ ಸಮುದಾಯದವರು ಸವರ್ಣೀಯರು ಬಳಸುವ ನೀರನ್ನು ಮುಟ್ಟಬಾರದು! ದೇವಾಲಯಗಳನ್ನು ಪ್ರವೇಶಿಸಬಾರದು! ಎಂಬ ಕಠೋರ ಕಟ್ಟಳೆಗಳೇ ಇದ್ದವು. ಇಂದಿಗೂ ಭಾರತದ ಗ್ರಾಮೀಣ ಭಾಗಗಳಲ್ಲಿ ಈ ನಿಷೇಧಗಳು ಭೀಕರ ಎನಿಸುವಷ್ಟರ ಮಟ್ಟಿಗೆ ಆಚರಣೆಯಲ್ಲಿವೆ. ವರ್ಣಾಶ್ರಮ ಧರ್ಮ ಹೇಳುವ ಇಂತಹ ಹೀನ ನಿಷೇಧಗಳನ್ನು ಧಿಕ್ಕರಿಸಿ ಡಾ. ಬಿ.ಆರ್. ಅಂಬೇಡ್ಕರ್ ಅವರು 1927ರಲ್ಲಿ ಮಹಾಡ್ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ದೊಡ್ಡ ಚಳವಳಿಯನ್ನೇ ನಡೆಸಬೇಕಾಯಿತು! ಈ ಮೂಲಕ ಜಲವನ್ನು ವಿಮೋಚನೆಗೊಳಿಸಿದರು.

ನದಿಗಳಂತೆಯೇ ಸಾಹಿತ್ಯ, ಕಲೆ, ಸಂಗೀತ, ರಂಗಭೂಮಿಯೂ ಕೂಡ ಮನುಕುಲವನ್ನು ಬೆಸೆಯುವ ಮಾನವತ್ವದ ಬೀಜಗಳನ್ನು ಹೃದಯಗಳಲ್ಲಿ ಬಿತ್ತುವ ಕಲೆಯನ್ನು ಕರಗತ ಮಾಡಿಕೊಂಡಿವೆ. ವಿದೇಶಿ ಆಕ್ರಮಣಕಾರರು ಭಾರತದ ಐಹಿಕ ಸಂಪತ್ತನ್ನು ಲೂಟಿ ಮಾಡಿದರೆ, ಈ ಪ್ರಾಚೀನ ಜಾತಿಪದ್ಧತಿಯ ಆಚರಣೆಯಲ್ಲಿ ನಂಬಿಕೆಯಿಟ್ಟಿರುವ ಸಂಪ್ರದಾಯವಾದಿಗಳು ಜೋಡಿಸುವ ಕಲೆಯನ್ನೇ ಹಾಳುಗೆಡವುತ್ತಿದ್ದಾರೆ. ಅವರ ಅಸಹನೆಯ ಮಾತುಗಳು ಸಂಗೀತ ಮತ್ತು ರಂಗಭೂಮಿಯಂತಹ ಕಲೆಗಳಲ್ಲೂ ಜಾತಿಪದ್ಧತಿಯ ತರತಮ ಭಾವಗಳನ್ನು ಎತ್ತಿ ಹಿಡಿಯುವಲ್ಲಿ ನಿರತವಾಗಿವೆ. ದೇಶದ ಸಂಪತ್ತಿನ ಲೂಟಿ ಅಧಿಕಾರ ಮತ್ತು ಐಶ್ವರ್ಯದ ಲಾಲಸೆಯಿಂದ ಆಗಿದ್ದರೆ; ಎರಡನೆಯದು ಅಜ್ಞಾನ ಹಾಗೂ ಜಾತಿಪದ್ಧತಿ ಸೃಷ್ಟಿಸಿರುವ ಕೆಡುಕಿನಿಂದ ಆಗುತ್ತಿದೆ. ಈ ಎಲ್ಲ ಭಗ್ನತೆಗಳು ಆರಂಭವಾಗಿರುವುದು ಶಿಕ್ಷಿತ ವರ್ಗದಿಂದ ಬಂದವರಿಂದ ಎನ್ನುವುದೇ ಆಶ್ಚರ್ಯದ ಸಂಗತಿ! ಸಂಗೀತ ಮತ್ತು ರಂಗಭೂಮಿ ಎನ್ನುವುದು ಮಾನವ ಸಮುದಾಯದ ಸೃಜನಶೀಲ ಕ್ರಿಯೆಯ ಅವಿಭಾಜ್ಯ ಅಂಗ. ಕಲೆಗಳು ಅರಳುವುದೇ ಬಹುತ್ವದ ನೆಲೆಯಲ್ಲಿ. ಜಾತ್ಯತೀತತೆ, ಮಾನವತೆ ಹಾಗೂ ಒಗ್ಗೂಡಿ ನಡೆಯುವುದನ್ನು ಈ ಕಲೆಗಳು ಮನುಕುಲಕ್ಕೆ ಕಲಿಸಿವೆ. ಇವುಗಳನ್ನು ಆಲಿಸಿದಾಗ, ನೋಡಿದಾಗ ನಮ್ಮ ಮನಸ್ಸು ಅರಳುತ್ತದೆ. ವಿಶೇಷವಾದ ಅನುಭವಕ್ಕೆ ಮನಸ್ಸು ಹೊರಳುತ್ತದೆ. ಈ ಅನುಭವ ಪಡೆಯಲು ಯಾವ ಉಚ್ಚ ಶಿಕ್ಷಣದ ಅಗತ್ಯವೂ ಬೇಕಿಲ್ಲ! ಆದರೆ ಕೇಳುವ ನದಿಯಂಥ ಹೃದಯ, ಆಕಾಶದಂಥ ಮನಸ್ಸು ಇರಬೇಕಷ್ಟೆ! ಇಂತಹ ಕಲೆಗಳಲ್ಲಿ ಜಾತಿ, ಧರ್ಮಗಳನ್ನು ಹುಡುಕಿ ರಾಡಿಗೊಳಿಸುವುದು, ಜಾತಿಪದ್ಧತಿ ಆಳವಾಗಿ ಬೇರೂರಿರುವ ಭಾರತೀಯ ಪ್ರಾಚೀನ ಸಮಾಜದಲ್ಲಿರುವ ಈ ಅಂಶ ಅಧ್ಯಯನಕ್ಕೆ ಅರ್ಹವಾಗಿದೆ.

ಎಲ್ಲ ವೈವಿಧ್ಯಮಯ ಕಲಾ ಸೃಷ್ಟಿಯಲ್ಲಿ ಕಾಣಬರುವ ಒಂದೇ ಒಂದು ಸಾಮಾನ್ಯ ಅಂಶ ಎಂದರೆ, ಜನತೆಯ ಏಕತೆ ಎಂದು ಹೇಳಲು ಯಾವ ಸಂಶೋಧನೆಯೂ ಬೇಕಾಗಿಲ್ಲ! ಮನುಕುಲ ಸೃಷ್ಟಿಸಲಾಗದ್ದನ್ನು ಈ ಕಲೆಗಳು ನಿರಂತರ ಪರಿಶ್ರಮದಿಂದ ಸೃಷ್ಟಿಸಿವೆ. ಇದೊಂದು ಪ್ರತಿಮಾ ಸೌಂದರ್ಯ. ಜಾತಿ, ವರ್ಗ, ಧರ್ಮ, ಉಚ್ಚ, ನೀಚ ಹಾಗೂ ಲಿಂಗ ತಾರತಮ್ಯವಿರದ ಕಲೆಗಳು ತಾವೂ ಬೆಳೆಯುತ್ತಾ, ಇತರರನ್ನೂ ಬೆಳೆಸುತ್ತಾ ಹೋಗುವುದೇ ಇವುಗಳ ಗುಣ.

ಶ್ರೇಷ್ಠ ಕಲೆಗೆ ಜಾತಿ, ವರ್ಗಗಳೇ ಪ್ರಮಾಣವಲ್ಲ! ಉತ್ತಮ ಜಾತಿ ಹಾಗೂ ವರ್ಗದವರಿಂದಲೇ ಕಲೆ, ಸಾಹಿತ್ಯ ಸೃಷ್ಟಿಯಾಗುತ್ತದೆ ಎಂದು ಚಿಂತಿಸುವವರು ಯಾರೇ ಆಗಿರಲಿ, ಅವರು ನಿಸ್ಸಂದೇಹವಾಗಿ ಕಲೆಯನ್ನು ಅಪಮಾರ್ಗದಲ್ಲಿ ಗ್ರಹಿಸುವವರು ಎಂದೇ ಹೇಳಬಹುದು. ಈ ನಿಲುವು ಜಾತಿಪದ್ಧತಿ ಸೃಷ್ಟಿಸಿರುವ ಉಚ್ಚ, ನೀಚ ಎಂಬ ವಿಕೃತ ಚಿಂತನೆ ಆಳವಾಗಿ ಬೇರೂರಿರುವ ಮನಸ್ಸುಗಳಿಂದ ಮಾತ್ರ ಹೊರಬರಲು ಸಾಧ್ಯ! ಎಲ್ಲಾ ಕಲೆಗಳೂ ಬೋಧಿಸುವುದು ಯಾರನ್ನೂ ದ್ವೇಷಿಸದ, ತಿರಸ್ಕರಿಸದ ಅಹಿಂಸಾ ಮಾರ್ಗವನ್ನೇ. ಜಗತ್ತು ಸಹೋದರತೆ ಮತ್ತು ಅಹಿಂಸೆಯ ಪಾಠ ಕಲಿತಿದ್ದು ಇಂತಹ ವಿಶಾಲ ಮನಸ್ಸಿನ ಕಲೆಗಳಿಂದಲೇ. ಈ ತತ್ವವು ಮನುಕುಲವನ್ನು ಎತ್ತರವಾದ ಸ್ಥಾನಕ್ಕೆ ಕೊಂಡೊಯ್ಯುತ್ತದೆ ಎಂದು ಹೇಳಲು ನೂರಾರು ಉದಾಹರಣೆಗಳನ್ನು ಈ ಮಾರ್ಗದಲ್ಲಿ ನಡೆದ ಉದಾರಚರಿತರು ನಮಗೆ ತೋರಿಸಿಕೊಟ್ಟಿದ್ದಾರೆ. 'ನನಗೆ ಸಾಂಸ್ಕೃತಿಕ ಪ್ರತ್ಯೇಕತೆ ಸಲ್ಲದು' ಎಂದು ಹೇಳಿದ ಗಾಂಧೀಜಿಯ ಮಾತು ಇಂದು ಕಠೋರವಾದಿಗಳ ಹೃದಯಕ್ಕೆ ಶುದ್ಧ ಗಾಳಿ ಮತ್ತು ಬೆಳಕಿನಂತೆ ಅವರೊಳಗೆ ತುಂಬಿಕೊಳ್ಳಬೇಕು! ಈ ಮಾತು ಕೇವಲ ಒಂದು ಸಮಾಜಕ್ಕೆ, ಒಂದು ದೇಶಕ್ಕೆ ವ್ಯಾಪಿಸಿಕೊಂಡರೆ ಮಾತ್ರ ಸಾಲದು! ಅದು ವಿಶ್ವದುದ್ದಕ್ಕೂ ವ್ಯಾಪಿಸಿಕೊಳ್ಳಬೇಕೆಂಬುದು ಗಾಂಧೀಜಿಯವರ ಆಶಯವಾಗಿತ್ತು.

ನಮ್ಮ ಪೂರ್ವಿಕರು ನಮಗೆ ಉಡುಗೊರೆಯಾಗಿ ಬಿಟ್ಟುಹೋಗಿರುವ ಸಾಹಿತ್ಯ, ಕಲೆ, ಸಂಗೀತ, ರಂಗಭೂಮಿ ಇವೆಲ್ಲವೂ ಅತ್ಯಂತ ನಿಗೂಢ ರೀತಿಯಲ್ಲಿ ಹೃದಯವನ್ನು ಹದಮಾಡುತ್ತವೆ. ಕೇಳುವಿಕೆಗೆ, ನೋಡುವಿಕೆಗೆ, ಸ್ಪರ್ಶಕ್ಕೆ ಹಾಗೂ ಮಾತುಗಳಿಗೆ ಸುಲಭವಾಗಿ ಎಟುಕದ ಈ ಕಲೆಗಳು ಮನುಷ್ಯನ ಸೃಜನಶೀಲ ಪ್ರತಿಭೆಯ ಉನ್ನತ ಕೊಡುಗೆ. ಸಮಾಜವನ್ನು ಛಿದ್ರಗೊಳಿಸುವ ದ್ವೇಷ, ಹಿಂಸೆ, ಜಾತಿ, ಯುದ್ಧ ಹಾಗೂ ಅಸಹಿಷ್ಣುತೆ ಇಂತಹ ಸಂಕುಚಿತವೂ, ಕಂಟಕವೂ ಆದ ಕಳೆಗಳನ್ನು ಕಿತ್ತು ಭ್ರಾತೃತ್ವದ ಫಸಲನ್ನು ನೀಡುತ್ತವೆ. ಟಾಲ್‌ಸ್ಟಾಯ್, ಕಬೀರ, ಕುವೆಂಪು, ಪಿಕಾಸೋ, ಸವಾಯಿ ಗಂಧರ್ವ, ಮಲ್ಲಿಕಾರ್ಜುನ ಮನ್ಸೂರ ಇಂತಹ ಉನ್ನತ ಕಲಾ ಪ್ರತಿಭೆಗಳು ನಮ್ಮ ನಡುವೆ ಈಗಲೂ ಇರುವುದರಿಂದಲೇ ಜಗತ್ತು ಇನ್ನೂ ಸಹ್ಯವಾಗಿದೆ. ಇಲ್ಲವಾಗಿದ್ದರೆ, ಜಗತ್ತು ಎಂದೋ ಮರುಭೂಮಿಯಾಗಿರುತ್ತಿತ್ತು!

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಮಕ್ಕಳು ಉದ್ಯಾನವನದ ಮೊಗ್ಗುಗಳಂತೆ, ಎಚ್ಚರಿಕೆಯಿಂದ ಮತ್ತು ಪ್ರೀತಿಯಿಂದ ಪೋಷಿಸಬೇಕು. ಏಕೆಂದರೆ ಅವರು ರಾಷ್ಟ್ರದ ನಾಳಿನ ಪ್ರಜೆಗಳು.

  —ಜವಾಹರಲಾಲ್ ನೆಹರೂ
- ಜೀವನದಲ್ಲಿ ಹಣಕ್ಕಿಂತ ಗುಣ ಮುಖ್ಯ. ಏಕೆಂದರೆ, ನಮ್ಮಲ್ಲಿರುವ ಹಣವನ್ನು ನಾವೇ ಕಾಯಬೇಕು. ಆದರೆ, ನಮ್ಮ ಗುಣ–ನಡತೆಗಳೇ ನಮ್ಮನ್ನು ಕಾಯುತ್ತವೆ.

  —ಗೌತಮ ಬುದ್ಧ
- ಅವಿವೇಕ ವಿವೇಕವನ್ನು ಆಳುತ್ತದೆ.

  —ಸಾಕ್ರಟೀಸ್
- ಉತ್ತಮವಾದುದನ್ನು ಬೆರಳಿಟ್ಟು ತೋರುವುದು ಹೇಗೆ ವಿಮರ್ಶೆಯೋ ಹಾಗೆಯೇ, ಉತ್ತಮವಾದುದನ್ನು ಮೆಚ್ಚುವುದು ಒಂದು ತೆರನಾದ ವಿಮರ್ಶೆಯೇ.

  —ಕುವೆಂಪು
- ದೇವರನ್ನು ನೋಡಬೇಕಾದುದು ಪ್ರೀತಿಯ ರೂಪದಲ್ಲಿಯೇ ಹೊರತು, ಮಂದಿರ ಮಸೀದಿಯ ರೂಪದಲ್ಲಲ್ಲ.

  —ಕಬೀರ
- ಪರಿಪೂರ್ಣ ಮಹಿಳೆಯ ಪರಿಕಲ್ಪನೆ ಪರಿಪೂರ್ಣ ಸ್ವಾತಂತ್ರ್ಯ.

  —ಸ್ವಾಮಿ ವಿವೇಕಾನಂದ
- ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡುವುದೆ?

  —ಬಸವಣ್ಣ